**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ,**

**ಕೆ.ಜಿ.ಎಫ್,**

**ಸಿ.ಸಿ. ಸಂಖ್ಯೆಃ 2351/2023**

**ಸಿ.ಡಬ್ಲೂ: 4 /ಪಿ.ಡಬ್ಲೂಃ 3**

**ಪ್ರಮಾಣೀಕರಿಸಿದ ದಿನಾಂಕಃ 25-03-2026**

| | |
|---|---|
| **ಹೆಸರು** | ರಾದಿಕ |
| **ಗಂಡನ ಹೆಸರು** | ಶ್ರೀನಾಥ್ |
| **ವಯಸ್ಸು** | 34 ವರ್ಷ |
| **ವೃತ್ತಿ** | ಗೃಹಿಣಿ |
| **ವಾಸ** | **ಜಕ್ಕರಸಕುಪ್ಪ ಗ್ರಾಮ** |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದಃ-**

1. ಚಾಸಾ1 ಮತ್ತು 2 ನನ್ನ ಅತ್ತೆ ಮಾವಂದಿರು. ಚಾಸಾ3 ನನ್ನ ಗಂಡ. ಚಾಸಾ5 ಮತ್ತು 6 ನನಗೆ ಗೊತ್ತು. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನಗೆ ಗೊತ್ತು.

2. ದಿಃ26.03.2023 ರಂದು ಮ.2.00 ಗಂಟೆಗೆ ನನ್ನ ಮಾವನಾದ ಚಾಸಾ1 ರವರು 1 ನೇ ಆರೋಪಿ ಬಳಿ ನನ್ನ ಅತ್ತೆ ಆದ ಚಾಸಾ2 ರವರ ತವರು ಮನೆಯ ಆಸ್ತಿ ಆದ ಸರ್ವೆ ನಂ.144/8, 33 ಗುಂಟೆಗೆ ಸಂಬಂದ ಪಟ್ಟಂತೆ ಹಾಗೂ ಸರ್ವೆ ನಂ.144/6 ಮನೆಗೆ ಸಂಬಂದ ಪಟ್ಟಂತೆ ಅವರ ಪಾಲಿನ ವಿಭಾಗವನ್ನು ಕೇಳಿದಾಗ ಆ ಸಮಯದಲ್ಲಿ ಅವರ ನಡುವೆ ಬಾಯಿ ಮಾತಿನ ಜಗಳವಾಗಿರುತ್ತದೆ. ಅದೇ ದಿನ ರಾತ್ರಿ 8 ಗುಂಟೆಗೆ ನಾನು ಚಾಸಾ1 ರಿಂದ 3 ರವರು ಹಾಗೂ ನನ್ನ ಮಕ್ಕಳು ಮನೆಯಲ್ಲಿದ್ದಾಗ ಆರೋಪಿತರೆಲ್ಲರೂ ಗುಂಪುಕಟ್ಟಿಕೊಂಡು ನಮ್ಮ ಬಳಿ ಬಂದು ಗಲಾಟೆ ಮಾಡಿದ್ದು ಆ ಸಮಯದಲ್ಲಿ 1 ನೇ ಆರೋಪಿಯು ನನ್ನ ತಂದೆಯವರನ್ನು ಕರೆದುಕೊಂಡು ಬಂದಿದ್ದೇನೆ ಈಗ ಮಾತನಾಡಿ ಎಂದು ಹೇಳಿ ನಮಗೆ ಅವ್ಯಾಚ್ಯ ಶಬ್ದಗಳಿಂದ ಬೈದು ನಂತರ ಚಾಕುವಿನಿಂದ ನನ್ನ ಮಾವನಾದ ಚಾಸಾ1 ರವರ ಎರಡೂ ಕೈಗಳಿಗೂ ಹೊಡೆದು ರಕ್ತಗಾಯ ಮಾಡಿರುತ್ತಾರೆ.

3. ಆ ಸಮಯದಲ್ಲಿ 2 ನೇ ಆರೋಪಿ ಮತ್ತು ಇತರ ಆರೋಪಿತರು ಚಾಸಾ1 ಮತ್ತು 2 ರವರಿಗೆ ಕೈಗಳಿಂದ ಹೊಡೆದು ಕಾಲುಗಳಿಂದ ಒದ್ದಿರುತ್ತಾರೆ. ಸದರಿ ಜಗಳವನ್ನು ಬಿಡಿಸಲು ಹೋದ ನನ್ನ ಗಂಡನಾದ ಚಾಸಾ3 ರವರಿಗೆ ತಲೆ ಮೇಲೆ ಹೊಡೆದು ಎದೆಯ ಮೇಲೆ ಗುದ್ದಿ ನೋವುಂಟು ಮಾಡಿರುತಾತ್ರೆ. ಆ ಸಮಯದಲ್ಲಿ ನಮ್ಮ ನೆರೆ ಮನೆಯವರಾದ ಚಾಸಾ5 ಮತ್ತು 6 ರವರು ಗಲಾಟೆಯನ್ನು ಬಿಡಿಸಿ ನನ್ನ ಮಾವನಾದ ಚಾಸಾ1 ಮತ್ತು ಗಂಡನಾದ ಚಾಸಾ3 ರವರು ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಈ ವಿಚಾರಕ್ಕೆ ಸಂಬಂದ ಪಟ್ಟಂತೆ ದಿಃ02.04.2023 ರಂದು ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆ ದಿನ 1 ನೇ ಆರೋಪಿಯು ಚಾಸಾ1 ರವರಿಗೆ ಹೊಡೆಯಲು ಉಪಯೋಗಿಸಿದ ಚಾಕುವನ್ನು ನೋಡಿದರೆ

ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಚಾಕು ಅದೇ ಆಗಿರುತ್ತದೆ. ಅದನ್ನು ಈಗಾಗಲೇ ಎಂ ಒ 1 ಎಂದು ಗುರುತಿಸಲಾಗಿದೆ. ಆ ದಿನ ನಮ್ಮ ಜೊತೆ ಜಗಳ ಮಾಡಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ 1 ರಿಂದ 7 ಮತ್ತು 9 ಆರೋಪಿತರು ಹಾಜರಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು ತಮ್ಮ ಹೇಳಿಕೆಯ ಕೆಲವುಅಂಶಗಳಿಗೆ ವಿರುದ್ಧವಾಗಿ ಹೇಳುವ ಕಾರಣ ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

## <u>ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದಃ-</u>

4. ಸದರಿ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎರಡೂ ಆಸ್ತಿಗಳಲ್ಲಿ ನನ್ನ ಅತ್ತೆ ಆದ ಚಾಸಾ2 ರವರಿಗೆ 3/1 ಭಾಗದಂತೆ ಭಾಗವನ್ನು ಕೊಟ್ಟಿದ್ದು ಅದರಲ್ಲಿ ನಾವು ಸ್ವಾದೀನ ಇದ್ದು ಆದರೆ ಚಾಸಾ2 ರವರ ಅಕ್ಕಳಾದ 5 ನೇ ಆರೋಪಿಯು 3 ನೇ ಆರೋಪಿ ಸಹಾಯದಿಂದ ಪಹಣಿ ಮತ್ತು ಖಾತೆಯನ್ನು ಮಾಡಿಕೊಂಡಿದ್ದು ಈ ವಿಚಾರಕ್ಕೆ ಸಂಬಂದ ಪಟ್ಟಂತೆ ಹಲವಾರು ಬಾರಿ ಪಂಚಾಯಿತಿ ಆಗಿದ್ದು ಆದರೆ 5 ಮತ್ತು 2 ನೇ ಆರೋಪಿಯು ಈ ವಿಚಾರಕ್ಕೆ ಸಂಬಂದ ಪಟ್ಟಂತೆ ಆಗಾಗ ನಮ್ಮ ಜೊತೆ ಗಲಾಟೆ ಮಾಡುತ್ತಿದ್ದರು ಎಂದು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದರೆ ಸರಿ. ಸದರಿ ಗಲಾಟೆ ಸಮಯದಲ್ಲಿ ರಾತ್ರಿ 2 ನೇ ಆರೋಪಿಯು ಚಾಸಾ1 ರವರಿಗೆ ಕೈಗಳಿಂದ ಹೊಡೆದು ಕಾಲುಗಳಿಂದ ಒದ್ದಿದ್ದು ಇತರ ಆರೋಪಿತರಾದ 3 ರಿಂದ 7 ಆರೋಪಿತರು ವರ್ಷ ಎಂಬ ಅಪ್ರಾಪ್ತ ಆರೋಪಿಯೊಂದಿಗೆ ಸೇರಿಕೊಂಡು ಚಾಸಾ1 ರವರಿಗೆ ಕೈಗಳಿಂದಲೂ ಸಹ ಹೊಡೆದಿರುತ್ತಾರೆ ಎಂದರೆ ಸರಿ.

**ಪಾಟೀಸವಾಲಂು ಆರೋಪಿ ಪರ ವಕೀಲರು ಸಮಯಕೋರಿದ್ದು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**